## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/3631/2021
ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:01/10/2022.

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ (1) ಶ್ರೀ. ಅಬ್ದುಲ್ ಮಜೀದ್ @ ಮಾಜೀದ್, ಬಿನ್ ಅಬ್ದುಲ್ ಸಮದ, ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಔರಾದ(ಬಿ), ಜಿಲ್ಲೆ ಬೀದರ & ನಿಯೋಜನೆ ಮೇಲೆ ಈ ಹಿಂದಿನ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು, ಬೀದರ ಹಾಲಿ ಸಹಾಯಕ ಕೃಷಿ ನಿರ್ದೇಶಕರು, ಕಾರ್ಕಳ, ಉಡುಪಿ ಜಿಲ್ಲೆ (2) ಪಿ. ಶಿವಕುಮಾರ, ಬಿನ್ ವೀರಭದ್ರಪ್ಪಾ, ಸಿ.ಸಿ.ಟಿ., (ಕ್ಲರ್ಕ ಕಂ ಟೈಪಿಸ್ಟ್), ಈ ಹಿಂದಿನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೀದರ ಸದ್ಯ ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹುಮ್ನಾಬಾದ, ಬೀದರ ಜಿಲ್ಲೆ, ರವರುಗಳು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಈಶಾನ್ಯ ವಲಯ, ಕಲಬುರುಗಿ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **(1) ಶ್ರೀ. ಅಬ್ದುಲ್ ಮಜೀದ್ @ ಮಾಜೀದ್, ಬಿನ್ ಅಬ್ದುಲ್ ಸಮದ**, ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಔರಾದ(ಬಿ), ಜಿಲ್ಲೆ ಬೀದರ & ನಿಯೋಜನೆ ಮೇಲೆ ಈ ಹಿಂದಿನ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು, ಬೀದರ, ಹಾಲಿ ಸಹಾಯಕ ಕೃಷಿ ನಿರ್ದೇಶಕರು, ಕಾರ್ಕಳ, ಉಡುಪಿ ಜಿಲ್ಲೆ (2) ಪಿ. ಶಿವಕುಮಾರ, ಬಿನ್ ವೀರಭದ್ರಪ್ಪಾ, ಸಿ.ಸಿ.ಟಿ., (ಕ್ಲರ್ಕ ಕಂ ಟೈಪಿಸ್ಟ್), ಈ ಹಿಂದಿನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೀದರ ಸದ್ಯ ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹುಮ್ನಾಬಾದ, ಬೀದರ ಜಿಲ್ಲೆ (ಇನ್ನು ಮುಂದೆ 1 ಮತ್ತು 2ನೇ ಎದುರುದಾರರುಗಳು ಎಂದು ಕರೆಯಲ್ಪಡುತ್ತಾರೆ), ರವರುಗಳ ಮೇಲೆ ದೂರುದಾರರಾದ **ಶ್ರೀ. ಭಾಸ್ಕರಬಾಬು, ಬಿನ್ ಮರೆಪ್ಪ ಪಾತರಪಳ್ಳಿ**, ಸಾ: ಉಮಾಶಂಕರ್ ನಿಲಯ, ಮೊದಲನೆಯ ಮಹಡಿ, ಗಣಪತಿ ಮಂದಿರ ಹತ್ತಿರ, ನಾಗಾವರ ಮುಖ್ಯ ರಸ್ತೆ, ಎ.ಸಿ. ಪೋಸ್ಟ್, ನಾಗಾವರ, ಬೆಂಗಳೂರು, ಹಾಲಿ: ಶಾಹಗಂಜ್ ಲೇಬರ್ ಕಾಲೋನಿ, ಬೀದರ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಬೀದರ ಎಸಿಬಿ ಪೋಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ದೂರು ಅರ್ಜಿಯನ್ನು ಆಗಿನ ಡಿಎಸ್‌ಪಿ ರವರಾದ ಶ್ರೀ. ವಿಶ್ವನಾಥ್ ಕುಲಕರ್ಣಿರವರು ಸ್ವೀಕರಿಸಿ, ವಿಚಾರಣೆಯನ್ನು ಕೈಗೊಳ್ಳಲು ಹಿಂದಿನ ಪಿ.ಐ.ರವರಾದ ಸಿದ್ದರಾಮಯ್ಯ ಬಿ.ಎಮ್. ರವರಿಗೆ ವಹಿಸಿದ್ದು, ಸದರಿ ಪಿ.ಐ.ರವರು ದಿ:12/09/2016ರಂದು ಅರ್ಜಿಯ ಪ್ರಾಥಮಿಕ ವಿಚಾರ ಮಾಡಲು ಅನುಮತಿ ಕೋರಿ ಮಾನ್ಯ ಎಡಿಜಿಪಿ, ಎಸಿಬಿ, ಬೆಂಗಳೂರುರವರಿಗೆ ಪತ್ರ ಬರೆದು ಅನುಮತಿ ಪಡೆದು ನಂತರ ಸದರಿ ಅರ್ಜಿ ವಿಚಾರಣೆ ಕೈಗೊಂಡು, ಸದರಿ ವಿಷಯದ ಕುರಿತು ನಾಲ್ಕು ಕೋಟಿ ರೂಪಾಯಿ ಹಣವನ್ನು ದುರುಪಯೋಗ ಪಡಿಸಿಕೊಂಡು

ಅವ್ಯವಹಾರ ನಡೆಸಿದ ಬಗ್ಗೆ ಅರೋಪ ಸಾಬೀತು ಪಡಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಎಡಿಜಿಪಿ, ಎಸಿಬಿ, ಬೆಂಗಳೂರುರವರಲ್ಲಿ ದಿ:14/12/2016ರಂದು ವರದಿ ಸಲ್ಲಿಸಿದ್ದು ಇರುತ್ತದೆ. ಅದರಂತೆ ಎಡಿಜಿಪಿ, ಎಸಿಬಿ, ಬೆಂಗಳೂರು, ಇವರು ಎದುರುದಾರರ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ವ್ಯವಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿದ್ದು ಇರುತ್ತದೆ. ನಂತರ ಸರಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ, (ಸೇವೆಗಳು ಮತ್ತು ಸಮನ್ವಯ) ಬೆಂಗಳೂರು, ರವರು ಹೊರಡಿಸಿದ ಕರ್ನಾಟಕ ಸರ್ಕಾರ ನಡಾವಳಿ ಆದೇಶ ಸಂ:ಕೃಇ 39 ಕೃಪವಿ. 2018, ಬೆಂಗಳೂರು, ದಿ:20/08/2018ನೇದ್ದರಲ್ಲಿ ಎದುರುದಾರರು ಹಾಗೂ ಇತರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆದೇಶಿಸಿದ್ದು, ಸದರಿ ಆದೇಶದನ್ವಯ ಎದುರುದಾರರು ಮತ್ತು ಇತರ ಖಾಸಗಿ ವ್ಯಕ್ತಿಗಳ ಮೇಲೆ ದಿ:06/10/2018ರಂದು ಬೀದರ ಎಸಿಬಿ ಪೋಲೀಸ್ ಠಾಣಾ ಮೊ.ಸಂ:08/2018ರಲ್ಲಿ ಕಲಂ 13(1)(ಎ) ಭ್ರಷ್ಟಾಚಾರ ನಿಷೇಧ ಕಾಯಿದೆ ಹಾಗೂ ಕಲಂ 406, 409, 420, ಸಹ ಕಲಂ 34 ಭಾ.ದ. ಸಂಹಿತೆ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು ಇರುತ್ತದೆ. ತನಿಖಾಧಿಕಾರಿಗಳ ತನಿಖಾ ವರದಿಯಿಂದ ಸರ್ಕಾರದ ಅನುದಾನದ ಹಣ ದುರ್ಬಳಕೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ಹಾನಿ ಉಂಟುಮಾಡಿ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಬೀದರ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ: 08/2018 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

2. ದೂರುದಾರರಾದ ಶ್ರೀ. ಭಾಸ್ಕರಬಾಬುರವರು ಬೀದರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕ್ರೈಸ್ತರ ಅಭಿವೃದ್ಧಿ ಮತ್ತು ಜೀರ್ಣೋದ್ಧಾರಕ್ಕಾಗಿ ಕ್ರಿಶ್ಚಿಯನ್ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಮತ್ತು ಚರ್ಚ್‌ಗಳ ನವೀಕರಣಕ್ಕಾಗಿ ಜಿಲ್ಲಾ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೀದರ ಜಿಲ್ಲೆಗೆ ಸಂಬಂಧಿಸಿದಂತೆ ಹೊಲಿ ಸ್ಪಿರಿಚ್ವಲ್ ಚರ್ಚ್, ಚರ್ಚ್ ಆಫ್ ಗಾಡ್ ಮಿನಿಸ್ಟ್ರಿ ಮತ್ತು ಮೊಸೆಸ್ ಏವೆಂಜಿಕಲ್ ಸಂಸ್ಥೆಗೆ ಸಂಬಂಧಿಸಿದ ಸುಮಾರು 7–ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಪ್ರತಿಯೊಂದಕ್ಕೆ 50–ಲಕ್ಷದಂತೆ ಒಟ್ಟು 3–ಕೋಟಿ 50–ಲಕ್ಷ ಮತ್ತು 5–ಚರ್ಚ್‌ಗಳ ನವೀಕರಣಕ್ಕಾಗಿ ಪ್ರತಿಯೊಂದಕ್ಕೆ ರೂ.10–ಲಕ್ಷದಂತೆ ಒಟ್ಟು 50–ಲಕ್ಷ, ಹೀಗೆ ಒಟ್ಟು 4–ಕೋಟಿ ಅನುದಾನದ ಹಣವನ್ನು ಸರ್ಕಾರದ ಯೋಜನೆ ಮತ್ತು ರೂಪುರೇಷದಂತೆ ಕಾಮಗಾರಿ ನಿರ್ವಹಿಸದೇ ಸದರಿ ಈ ಮೇಲಿನ ಚರ್ಚ್ ಸಂಸ್ಥೆಗಳ ಅಧ್ಯಕ್ಷರುಗಳು ಹಾಗೂ ಬೀದರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಅಧಿಕಾರಿಗಳು ಕೂಡಿಕೊಂಡು ಸರ್ಕಾರದಿಂದ ಮಂಜೂರಾದ ಹಣವನ್ನು ದುರ್ಬಳಕೆ ಮಾಡಿರುತ್ತಾರೆಂದು ಫಿರ್ಯಾದಿದಾರರು ದಿನಾಂಕ:23/07/2016 ರಂದು ಬೀದರ ಎಸಿಬಿ ಪೋಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ದೂರು ಅರ್ಜಿಯನ್ನು ಆಗಿನ ಡಿಎಸ್‌ಪಿ ರವರಾದ ಶ್ರೀ. ವಿಶ್ವನಾಥ್ ಕುಲಕರ್ಣಿ ರವರು ಸ್ವೀಕರಿಸಿ, ವಿಚಾರಣೆಯನ್ನು ಕೈಗೊಳ್ಳಲು ಹಿಂದಿನ ಪಿ.ಐ.ರವರಾದ ಸಿದ್ದರಾಮಯ್ಯ ಬಿ.ಎಮ್. ರವರಿಗೆ ವಹಿಸಿದ್ದು, ಸದರಿ ಪಿ.ಐ.ರವರು ದಿ:12/09/2016ರಂದು ಅರ್ಜಿಯ ಪ್ರಾಥಮಿಕ ವಿಚಾರ ಮಾಡಲು ಅನುಮತಿ ಕೋರಿ ಮಾನ್ಯ ಎಡಿಜಿಪಿ, ಎಸಿಬಿ, ಬೆಂಗಳೂರುರವರಿಗೆ ಪತ್ರ ಬರೆದು ಅನುಮತಿ ಪಡೆದು ನಂತರ ಸದರಿ ಅರ್ಜಿ ವಿಚಾರಣೆ ಕೈಗೊಂಡು, ಸದರಿ ವಿಷಯದ ಕುರಿತು ನಾಲ್ಕು ಕೋಟಿ ರೂಪಾಯಿ ಹಣವನ್ನು ದುರುಪಯೋಗ ಪಡಿಸಿಕೊಂಡು ಅವ್ಯವಹಾರ ನಡೆಸಿದ ಬಗ್ಗೆ ಅರೋಪ ಸಾಬೀತು ಪಡಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಎಡಿಜಿಪಿ, ಎಸಿಬಿ, ಬೆಂಗಳೂರುರವರಲ್ಲಿ ದಿ:14/12/2016ರಂದು ವರದಿ ಸಲ್ಲಿಸಿದ್ದು ಇರುತ್ತದೆ. ಅದರಂತೆ ಎಡಿಜಿಪಿ, ಎಸಿಬಿ, ಬೆಂಗಳೂರು, ಇವರು ಆಪಾದಿತರ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ವ್ಯವಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿದ್ದು ಇರುತ್ತದೆ. ನಂತರ ಸರಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ, (ಸೇವೆಗಳು ಮತ್ತು ಸಮನ್ವಯ) ಬೆಂಗಳೂರು, ರವರು ಹೊರಡಿಸಿದ ಕರ್ನಾಟಕ ಸರ್ಕಾರ ನಡಾವಳಿ ಆದೇಶ ಸಂ:ಕೃಇ 39 ಕೃಪವಿ. 2018, ಬೆಂಗಳೂರು, ದಿ:20/08/2018ನೇದ್ದರಲ್ಲಿ 1ನೇ ಎದುರುದಾರರು

ಹಾಗೂ ಇತರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆದೇಶಿಸಿದ್ದು, ಸದರಿ ಆದೇಶದನ್ವಯ ಎದುರುದಾರರು ಮತ್ತು ಇತರ 5-ಜನ ಖಾಸಗಿ ವ್ಯಕ್ತಿಗಳ ವಿರುದ್ಧ ದಿ:06/10/2018ರಂದು ಬೀದರ ಎಸಿಬಿ ಪೋಲೀಸ್ ಠಾಣಾ ಮೊ.ಸಂ:08/2018ರಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು ಇರುತ್ತದೆ.

3. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ದಿ: 09/10/2018ರಂದು ಸರ್ಕಾರಿ ಪಂಚರುಗಳಾದ (1) ಶ್ರೀ. ರುದ್ರಯ್ಯ ಬಂಡಯ್ಯ ಮಠಪತಿ, ಕಂದಾಯ ನಿರೀಕ್ಷಕರು, (ಎಫ್.ಡಿ.ಎ.) ನಗರಸಭೆ, ಬೀದರ್, (2) ವಿಶ್ವನಾಥ್, ಎಫ್.ಡಿ.ಎ., ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ-ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬೀದರ್, ಇವರುಗಳನ್ನು ಬೆಳಿಗ್ಗೆ 11-00 ಗಂಟೆಗೆ ಬರಮಾಡಿಕೊಂಡು ಅವರುಗಳ ಪರಿಚಯ ಮಾಡಿಕೊಂಡು, ಸಿಬ್ಬಂದಿಗಳ ಪರಿಚಯ ಮಾಡಿಸಿ, ದೂರಿನ ವಿಷಯ ತಿಳಿಸಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದ ಸಮುದಾಯ ಭವನಗಳು ಮತ್ತು ಚರ್ಚ್‌ಗಳಿಗೆ ಭೇಟಿಮಾಡಿ, ಅವುಗಳ ಪರಿಶೀಲನಾ ಪಂಚನಾಮೆ ಕೈಗೊಳ್ಳಲು ಕೋರಿಕೊಂಡಿರುತ್ತಾರೆ. ಅದರಂತೆ, ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ಎಸಿಬಿ ಕಚೇರಿಯಿಂದ ಹೊರಟು ಔರಾದ್ ತಾಲ್ಲೂಕಿನ ಮುಸ್ತಾಪುರ ಗ್ರಾಮಕ್ಕೆ ತಲುಪಿ, ಗ್ರಾಮದಲ್ಲಿರುವ ಸೆವಂತ ಡೇ ಅಡವೆಂಟಿಸ್ಟ್ ಚರ್ಚ ಹತ್ತಿರ ಇರುವ ಸಮುದಾಯ ಭವನ ಕಟ್ಟಡ ಪರಿಶೀಲಿಸಲಾಗಿ ಸದರಿ ಕಟ್ಟಡದ ಕೆಲವಡೆ ಮಾತ್ರ ಪ್ಲಾಸ್ಟರ್ ಮಾಡಿದ್ದು, ಕಿಟಕಿಗಳಿಗೆ ಕೇವಲ ಗ್ರಿಲ್ ಅಳವಡಿಸಿದ್ದು, ಉಳಿದಂತೆ ಪ್ಲಾಸ್ಟರ್, ಫರ್ಸಿ (ಫ್ಲೋರಿಂಗ್) ವೈರಿಂಗ್, ಬಾಗಿಲುಗಳು, ಕಿಟಕಿ-ಬಾಗಿಲುಗಳು ಇತ್ಯಾದಿ ಯಾವುದೇ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದರಿ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತು ಅಪೂರ್ಣ ಸ್ಥಿತಿಯಲ್ಲಿ ಇರುತ್ತದೆ. ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.20-ರಿಂದ 22-ಲಕ್ಷಗಳಾಗಬಹುದೆಂದು ಊಹಿಸಲಾಯಿತು. ನಂತರ ಸದರಿ ಸಮುದಾಯ ಭವನದ ಪೂರ್ವ ದಿಕ್ಕಿಗೆ ಇದ್ದ ಚರ್ಚನ್ನು ಪರಿಶೀಲಿಸಿದ್ದು, ಚರ್ಚನಲ್ಲಿ ಒಂದು ಹಾಲ್ ಮತ್ತು ಎರಡು ಕೋಣೆಗಳಿದ್ದು, ಹಾಲ್ ಮತ್ತು ಒಂದು ಕೋಣೆಗೆ ಶಾಬಾದಿ ಪರ್ಸಿ ಹಾಕಿದ್ದು, ಇನ್ನೊಂದು ಕೋಣೆಗೆ ಪರ್ಸಿ ಹಾಕಿರುವುದಿಲ್ಲ. ಚರ್ಚನ 12-ಕಿಟಕಿಗಳಿಗೆ ಸ್ಲೈಡಿಂಗ್ ಗ್ಲಾಸ್ ಅಳವಡಿಸಿದ್ದು, ವೈರಿಂಗ್ ಹಾಗೂ 5-ಸೀಲಿಂಗ್ ಫ್ಯಾನ್ ಅಳವಡಿಸಿದ್ದು ಇರುತ್ತದೆ. ಈ ಕುರಿತಂತೆ ಸಮುದಾಯ ಭವನ ಮತ್ತು ಚರ್ಚನ್ನು ಮಧ್ಯಾಹ್ನ 12-00 ಗಂಟೆಯಿಂದ 01-00 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ.

4. ನಂತರ ತನಿಖಾಧಿಕಾರಿಗಳು ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ಮಸ್ತಾಪುರ ಗ್ರಾಮದಿಂದ ಹೊರಟು ಧೂಪತಮಹಾಗಾಂವ ಗ್ರಾಮದ ಚರ್ಚಗೆ ಬಂದಿದ್ದು, ಸದರಿ ಗ್ರಾಮದಲ್ಲಿರುವ ಸೆವಂತ ಡೇ ಅಡವೆಂಟಿಸ್ಟ್ ಚರ್ಚ ಹತ್ತಿರ ಇರುವ ಸಮುದಾಯ ಭವನ ಕಟ್ಟಡವನ್ನು ಪರಿಶೀಲಿಸಲಾಗಿ, ಕಟ್ಟಡದ ಕೆಲವಡೆ ಮಾತ್ರ ಪ್ಲಾಸ್ಟರ್ ಮಾಡಿದ್ದು, ಕಿಟಕಿಗಳಿಗೆ ಕೇವಲ ಗ್ರಿಲ್ ಅಳವಡಿಸಿದ್ದು, ಉಳಿದಂತೆ ಪ್ಲಾಸ್ಟರ್, ಫರ್ಸಿ (ಫ್ಲೋರಿಂಗ್) ವೈರಿಂಗ್, ಬಾಗಿಲುಗಳು, ಕಿಟಕಿ-ಬಾಗಿಲುಗಳು ಇತ್ಯಾದಿ ಯಾವುದೇ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದರಿ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತು ಅಪೂರ್ಣ ಸ್ಥಿತಿಯಲ್ಲಿ ಇರುತ್ತದೆ. ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.20-ರಿಂದ 25-ಲಕ್ಷಗಳಾಗಬಹುದೆಂದು ಊಹಿಸಲಾಯಿತು. ನಂತರ ಸದರಿ ಸಮುದಾಯ ಭವನದ ಸ್ವಲ್ಪ ಮುಂದೆ ಇದ್ದ ಎಸ್.ಡಿ.ಎ. ಚರ್ಚನ್ನು ಪರಿಶೀಲಿಸಿದ್ದು, ಚರ್ಚನಲ್ಲಿ ಒಂದು ಹಾಲ್ ಇದ್ದು, ಸದರಿ ಹಾಲ್‌ಗೆ ಶಾಬಾದಿ ಪರ್ಸಿ ಹಾಕಿದ್ದು, ವೈರಿಂಗ್ ಕೆಲಸ ಮಾಡಿ 3-ಸೀಲಿಂಗ್ ಫ್ಯಾನ್ 4-ಟ್ಯೂಬ್ ಲೈಟ್ ಅಳವಡಿಸಿದ್ದು ಇರುತ್ತದೆ. ಈ ಕುರಿತಂತೆ ಸಮುದಾಯ ಭವನ ಮತ್ತು ಚರ್ಚನ್ನು ಮಧ್ಯಾಹ್ನ 1-40 ಗಂಟೆಯಿಂದ 02-20 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ.

5. ನಂತರ ತನಿಖಾಧಿಕಾರಿಗಳು ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ಧೂಪತಮಹಾಗಾಂವ ಗ್ರಾಮದಿಂದ ಹೊರಟು ಔರಾದ್(ಬಿ) ತಾಲ್ಲೂಕಿನ ಸಂತಪೂರ ಗ್ರಾಮದಲ್ಲಿರುವ ಸೆವಂತ ಡೇ ಅಡವೆಂಟಿಸ್ಟ್ ಚರ್ಚ ಹತ್ತಿರ ಇರುವ ಸಮುದಾಯ ಭವನ ಕಟ್ಟಡ ಪರಿಶೀಲಿಸಲಾಗಿ, ಕಟ್ಟಡದ ಕೆಲವಡೆ ಮಾತ್ರ ಪ್ಲಾಸ್ಟರ್ ಮಾಡಿದ್ದು, ಕಿಟಕಿಗಳಿಗೆ ಕೇವಲ ಗ್ರಿಲ್ ಅಳವಡಿಸಿದ್ದು, ಕಟ್ಟಡಕ್ಕೆ ಒಂದು ಕೋಟ್ ಬಿಳಿ ಸುಣ್ಣ ಬಳಿದಿದ್ದು ಇರುತ್ತದೆ. ಉಳಿದಂತೆ ಬಾಗಶ: ಪ್ಲಾಸ್ಟರ್, ನೆಲಮಹಡಿಯ ಫರ್ಷಿ (ಫ್ಲೋರಿಂಗ್) ವೈರಿಂಗ್, ಬಾಗಿಲುಗಳು, ಕಿಟಕಿ–ಬಾಗಿಲುಗಳು ಇತ್ಯಾದಿ ಯಾವುದೇ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದರಿ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತು ಅಪೂರ್ಣ ಸ್ಥಿತಿಯಲ್ಲಿ ಇರುತ್ತದೆ. ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.24–ರಿಂದ 26–ಲಕ್ಷಗಳಾಗಬಹುದೆಂದು ಊಹಿಸಲಾಯಿತು. ನಂತರ ಸದರಿ ಸಮುದಾಯ ಭವನದ ಪಕ್ಕದಲ್ಲಿದ್ದ ಎಸ್.ಡಿ.ಎ. ಚರ್ಚನ್ನು ಪರಿಶೀಲಿಸಿದ್ದು, ಅಂದಾಜು 20*30 ಸುತ್ತಳತೆಯ ಮೇಲ್ಛಾವಣಿಗೆ ಒಂದು ಪದರ ಆರ್.ಸಿ.ಸಿ. ಲೇಯರ್ ಹಾಕಿದ್ದು ಇರುತ್ತದೆ. ಈ ಕುರಿತಂತೆ ಸಮುದಾಯ ಭವನ ಮತ್ತು ಚರ್ಚನ್ನು ಮಧ್ಯಾಹ್ನ 03–10 ಗಂಟೆಯಿಂದ 04–10 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ.

6. ನಂತರ ತನಿಖಾಧಿಕಾರಿಗಳು ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ಸಂತಪೂರ ಗ್ರಾಮದಿಂದ ಹೊರಟು ನಂದ್ಯಾಳ ಗ್ರಾಮದಲ್ಲಿರುವ ಸೆವಂತ ಡೇ ಅಡವೆಂಟಿಸ್ಟ್ ಚರ್ಚ ಹತ್ತಿರ ಇರುವ ಸಮುದಾಯ ಭವನದ ಕಟ್ಟಡವನ್ನು ಪರಿಶೀಲಿಸಲಾಗಿ, ಕಟ್ಟಡದ ಕೆಲವಡೆ ಮಾತ್ರ ಪ್ಲಾಸ್ಟರ್ ಮಾಡಿದ್ದು, ಕಿಟಕಿಗಳಿಗೆ ಕೇವಲ ಗ್ರಿಲ್ ಅಳವಡಿಸಿದ್ದು, ಸದರಿ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತು ಅಪೂರ್ಣ ಸ್ಥಿತಿಯಲ್ಲಿ ಇರುತ್ತದೆ. ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.18–ರಿಂದ 20–ಲಕ್ಷಗಳಾಗಬಹುದೆಂದು ಊಹಿಸಲಾಯಿತು. ನಂತರ ಸದರಿ ಸಮುದಾಯ ಭವನದ ಪಕ್ಕದಲ್ಲಿದ್ದ (ಪೂರ್ವಕ್ಕೆ) ಎಸ್.ಡಿ.ಎ. ಚರ್ಚನ್ನು ಪರಿಶೀಲಿಸಿದ್ದು, ಸದರಿ ಚರ್ಚಗೆ ಯಾವುದೇ ಕಾಮಗಾರಿ ಕೈಗೊಂಡಿರುವುದು ಕಂಡು ಬಂದಿರುವುದಿಲ್ಲ. ಈ ಕುರಿತಂತೆ ಸಮುದಾಯ ಭವನ ಮತ್ತು ಚರ್ಚನ್ನು ಸಾಯಂಕಾಲ 05–00 ಗಂಟೆಯಿಂದ 06–00 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ ಹಾಗೂ ಎಲ್ಲಾ ಸ್ಥಳಗಳಲ್ಲಿ ತನಿಖಾಧಿಕಾರಿಗಳು ಸಿಬ್ಬಂದಿ ಮೂಲಕ ಡಿಜಿಟಲ್ ಕ್ಯಾಮರಾದಲ್ಲಿ ಫೋಟೋಗಳನ್ನು ತೆಗೆಯಿಸಿ, ಆಯಾ ಸ್ಥಳಗಳಲ್ಲಿ ಹಂತಹಂತವಾಗಿ ಲ್ಯಾಪ್‌ಟಾಪ್ ಮೂಲಕ ಸಿಬ್ಬಂದಿಗೆ ಉಕ್ತಲೇಖನ ನೀಡಿ ಮಹಜರ್‌ನ್ನು ಬೆಳಿಗ್ಗೆ 11–45 ಗಂಟೆಯಿಂದ ಸಂಜೆ 6–00 ಗಂಟೆಯವರೆಗೆ ಜರುಗಿಸಿರುತ್ತಾರೆ.

7. ನಂತರ ತನಿಖಾಧಿಕಾರಿಗಳು ದಿ:11/10/2018ರಂದು ಸರ್ಕಾರಿ ಪಂಚರುಗಳಾದ (1) ಶ್ರೀ. ರುದ್ರಯ್ಯ ಬಂಡಯ್ಯ ಮಠಪತಿ, (2) ವಿಶ್ವನಾಥ್, ಇವರುಗಳನ್ನು ಬೆಳಿಗ್ಗೆ 10–30 ಗಂಟೆಗೆ ಪುನ: ಬರಮಾಡಿಕೊಂಡು ದೂರಿಗೆ ಸಂಬಂಧಪಟ್ಟಂತೆ ಇನ್ನುಳಿದ ಸಮುದಾಯ ಭವನಗಳು ಮತ್ತು ಚರ್ಚಗಳ ಪರಿಶೀಲನೆ ಕುರಿತಾದ ಮುಂದುವರೆದ ಪಂಚನಾಮೆ ಕೈಗೊಳ್ಳಲು ಕೋರಿಕೊಂಡಿರುತ್ತಾರೆ. ಅದರಂತೆ, ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ಬೀದರ್ ಎಸಿಬಿ ಕಚೇರಿಯಿಂದ ಹೊರಟು ಬೀದರ್ ತಾಲ್ಲೂಕಿನ ಗಾದಗಿ ಗ್ರಾಮವನ್ನು 11–00 ಗಂಟೆಗೆ ತಲುಪಿ, ಸದರಿ ಗ್ರಾಮದಲ್ಲಿರುವ ಸಮುದಾಯ ಭವನ ಕಟ್ಟಡ ಪರಿಶೀಲಿಸಲಾಗಿ, ಮೊದಲಿಗೆ ಹಾಲ್ ಇದ್ದು, ಅದರ ಪಕ್ಕದಲ್ಲಿ ಎರಡು ಕೋಣೆಗಳಿದ್ದು, ಸದರಿ ಕೋಣೆಯ ಗೋಡೆಗಳು ಬಿರುಕು ಬಿಟ್ಟಿದ್ದು, ಸದರಿ ನೆಲಮಹಡಿಯಲ್ಲಿ ಶಾಬಾದಿ ಫರ್ಷಿ ಕಲ್ಲು ಹಾಸಿದ್ದು ಮತ್ತು ಎರಡು ಬದಿಯಲ್ಲಿ ಕಬ್ಬಿಣದ ಸ್ಲೈಡಿಂಗ್ ಗ್ಲಾಸ್‌ನ ಕಿಟಕಿ ಅಳವಡಿಸಿದ್ದು, ಉಳಿದಂತೆ ಮೊದಲನೆಯ ಮಹಡಿಯಲ್ಲಿ ಒಂದು ಓಪನ್ ಹಾಲ್ ಇದ್ದು, ಮಹಡಿಯಲ್ಲಿ ಪ್ಲಾಸ್ಟರ್ ಕೆಲಸ ಪೂರ್ಣಗೊಂಡಿರುತ್ತದೆ. ಸದರಿ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು ಉತ್ತಮ ಗುಣಮಟ್ಟದಲ್ಲಿ ಕಾಮಗಾರಿಯಾಗಿರುವುದಿಲ್ಲ, ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.30–ರಿಂದ 35–

ಲಕ್ಷಗಳಾಗಬಹುದೆಂದು ಊಹಿಸಲಾಯಿತು. ಈ ಕುರಿತಂತೆ ಕ್ರಿಶ್ಚಿಯನ್ ಸಮುದಾಯ ಭವನವನ್ನು ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 12-15 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ.

**8.** ನಂತರ ತನಿಖಾಧಿಕಾರಿಗಳು ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ಗಾದಗಿ ಗ್ರಾಮದಿಂದ ಹೊರಟು ಹುಮನಾಬಾದ ತಾಲ್ಲೂಕಿನ ನಮದಾಪೂರ ವಾಡಿ ಗ್ರಾಮದ (ಎಸ್.ಡಿ.ಎ)ಸೆವಂತ ಡೇ ಅಡವೆಂಟಿಸ್ಟ್ ಚರ್ಚ ಹತ್ತಿರ ಇರುವ ಸಮುದಾಯ ಭವನ ಕಟ್ಟಡ ಪರಿಶೀಲಿಸಲಾಗಿ, ಕಟ್ಟಡದ ಹಾಲ್‌ಗೆ ಶಾಬಾದಿ ಫರ್ಸಿ ಹಾಸಿದ್ದು, ಚರ್ಚನ ಮೇಲೆ ಆರ್.ಸಿ.ಸಿ. ಕಾಮಗಾರಿ ಕೈಗೊಂಡಿದ್ದು ಹಾಗೂ ಚರ್ಚ ಮುಂಭಾಗದಲ್ಲಿ ಮೆಟ್ಟಿಲುಗಳ ಕಾಮಗಾರಿ ಕೈಗೊಂಡಿದ್ದು, ಚರ್ಚಗೆ ಬಿಳಿ ಬಣ್ಣದಿಂದ ಕಲರ್ ಮಾಡಿದ್ದು ಇರುತ್ತದೆ. ಚರ್ಚ ಪರಿಶೀಲಿಸಿದ ನಂತರ ಸದರಿ ಗ್ರಾಮದಿಂದ ಮುಗುನೂರ ಗ್ರಾಮಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಸಮುದಾಯ ಭವನಕ್ಕೆ ಹೋಗಿ ಪರಿಶೀಲಿಸಲಾಗಿ, ಸದರಿ ಕಟ್ಟಡದ ಬಾಗಿಲಿಗೆ ಚೌಕಟ್ಟು ಅಳವಡಿಸಿರುವುದಿಲ್ಲ, ಸದರಿ ಕಟ್ಟಡದ ನೆಲಮಹಡಿಯ ಹಾಲ್‌ಗೆ ಪ್ಲಾಸ್ಟರ್ ಆಗಿದ್ದು, ಅದರ ಹಿಂದಿನ ಕೋಣೆಗಳ ಗೋಡೆಗಳಿಗೆ ಪ್ಲಾಸ್ಟರ್ ಆಗಿರುವುದಿಲ್ಲ ಮತ್ತು ನೆಲಕ್ಕೆ ಫ್ಲೋರಿಂಗ್ ಆಗಿರುವುದಿಲ್ಲ. ಸದರಿ ಕಟ್ಟಡದ ಮೊದಲನೆಯ ಮಹಡಿಯಲ್ಲಿ ಒಂದು ಓಪನ್ ಹಾಲ್ ಇದ್ದು, ಫ್ಲೋರಿಂಗ್ ಆಗಿರುವುದಿಲ್ಲ, ಕಟ್ಟಡದ ಕೆಲವಡೆ ಮಾತ್ರ ಪ್ಲಾಸ್ಟರ್ ಮಾಡಿದ್ದು, ಕಿಟಕಿಗಳಿಗೆ ಕೇವಲ ಗ್ರಿಲ್ ಅಳವಡಿಸಿದ್ದು, ಉಳಿದಂತೆ ಬಾಗಶ: ಪ್ಲಾಸ್ಟರ್, ನೆಲಮಹಡಿಯ ಫರ್ಸಿ (ಫ್ಲೋರಿಂಗ್) ವೈರಿಂಗ್, ಬಾಗಿಲುಗಳು, ಕಿಟಕಿ-ಬಾಗಿಲುಗಳು ಇತ್ಯಾದಿ ಯಾವುದೇ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದರಿ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತು ಅಪೂರ್ಣ ಸ್ಥಿತಿಯಲ್ಲಿ ಇರುತ್ತದೆ. ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.20-ರಿಂದ 22-ಲಕ್ಷಗಳಾಗಬಹುದೆಂದು ಊಹಿಸಲಾಯಿತು. ಈ ಕುರಿತಂತೆ ಸಮುದಾಯ ಭವನ ಮತ್ತು ಚರ್ಚನ್ನು ಮಧ್ಯಾಹ್ನ 01-15 ಗಂಟೆಯಿಂದ 03-20 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ.

**9.** ನಂತರ ತನಿಖಾಧಿಕಾರಿಗಳು ಇಲಾಖಾ ವಾಹನದಲ್ಲಿ ಸಿಬ್ಬಂದಿ ಮತ್ತು ಪಂಚರನ್ನು ಕರೆದುಕೊಂಡು ನಮದಾಪೂರ ವಾಡಿ ಗ್ರಾಮದಿಂದ ಹೊರಟು ಹುಮನಾಬಾದ ತಾಲ್ಲೂಕಿನ ಕಾರಪಾಕಪಳ್ಳಿ ಗ್ರಾಮದಲ್ಲಿರುವ ಕ್ರಿಶ್ಚಿಯನ್ ಸಮುದಾಯಕ್ಕೆ ಸಂಬಂಧಪಟ್ಟ ಸಮುದಾಯ ಭವನ ಕಟ್ಟಡ ಪರಿಶೀಲಿಸಲಾಗಿ, ಕಟ್ಟಡದ ಕೆಲವಡೆ ಮಾತ್ರ ಪ್ಲಾಸ್ಟರ್ ಮಾಡಿದ್ದು, ಕಿಟಕಿಗಳಿಗೆ ಕೇವಲ ಗ್ರಿಲ್ ಅಳವಡಿಸಿದ್ದು, ಸದರಿ ಕಟ್ಟಡದ ಫರ್ಸಿ (ಫ್ಲೋರಿಂಗ್) ವೈರಿಂಗ್, ಬಾಗಿಲುಗಳು, ಕಿಟಕಿ-ಬಾಗಿಲುಗಳು ಇತ್ಯಾದಿ ಯಾವುದೇ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಸದರಿ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತು ಅಪೂರ್ಣ ಸ್ಥಿತಿಯಲ್ಲಿ ಇರುತ್ತದೆ. ಪಂಚರುಗಳು ಸದರಿ ಕಟ್ಟಡದ ಮೌಲ್ಯಮಾಪನ ಮಾಡಿದ್ದು, ಅವರ ಅಭಿಪ್ರಾಯದಂತೆ ಅಂದಾಜು ರೂ.25-ರಿಂದ 28-ಲಕ್ಷಗಳಾಗಬಹುದೆಂದು ಊಹಿಸಲಾಯಿತು. ಈ ಕುರಿತಂತೆ ಸಮುದಾಯ ಮತ್ತು ಚರ್ಚನ್ನು ಮಧ್ಯಾಹ್ನ 04-00 ಗಂಟೆಯಿಂದ 06-00 ಗಂಟೆಯವರೆಗೆ ಪರಿಶೀಲಿಸಿದ್ದು ಇರುತ್ತದೆ ಹಾಗೂ ಮೇಲ್ಕಂಡ ಎಲ್ಲಾ ಸ್ಥಳಗಳಲ್ಲಿ ತನಿಖಾಧಿಕಾರಿಗಳು ಸಿಬ್ಬಂದಿ ಮೂಲಕ ಡಿಜಿಟಲ್ ಕ್ಯಾಮರಾದಲ್ಲಿ ಫೋಟೋಗಳನ್ನು ತೆಗೆಯಿಸಿ, ಆಯಾ ಸ್ಥಳಗಳಲ್ಲಿ ಹಂತಹಂತವಾಗಿ ಲ್ಯಾಪ್‌ಟಾಪ್ ಮೂಲಕ ಸಿಬ್ಬಂದಿಗೆ ಉಕ್ತಲೇಖನ ನೀಡಿ ಮಹಜರ್‌ನ್ನು ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಜರುಗಿಸಿರುತ್ತಾರೆ.

**10.** ತನಿಖಾಧಿಕಾರಿಗಳು ಪ್ರಥಮ ವರ್ತಮಾನದ ಕಾಲಕ್ಕೆ 2ನೇ ಎದುರುದಾರರ ಹೆಸರನ್ನು ಸೇರಿಸದೆ ಇದ್ದುದರಿಂದ ನಂತರ ಸದರಿಯವರ ಹೆಸರನ್ನು ಮಾನ್ಯ ನ್ಯಾಯಾಲಯದ ಅನುಮತಿ ಪಡೆದು 7ನೇ ಅಪಾದಿತ ಎಂದು ಅವರ ಹೆಸರನ್ನು ಸೇರ್ಪಡೆ ಮಾಡಿರುತ್ತಾರೆ.

**11.** ತನಿಖಾಧಿಕಾರಿಗಳು ಈ ಮೇಲೆ ಹೇಳಲಾದ ಸಮುದಾಯ ಭವನಗಳ ಮತ್ತು ಚರ್ಚಗಳ ಪರಿಶೀಲನೆಯನ್ನು ಪಂಚರುಗಳ ಸಮಕ್ಷಮ ಮಾಡಿ ಅವುಗಳ ಅಳತೆ ಇತ್ಯಾದಿಗಳನ್ನು ಪಡೆದುಕೊಂಡಿದ್ದು ಹಾಗೂ ಸದರಿ

ಕಾಮಗಾರಿಗಳ ಕುರಿತಂತೆ ಪಿಡಬ್ಲುಡಿ ಇಲಾಖೆಯಿಂದ ಕಟ್ಟಡಗಳ ಮೌಲ್ಯ ಮಾಪನ ವರದಿಗಳನ್ನು ಪಡೆದುಕೊಂಡಿರುತ್ತಾರೆ. ಕಟ್ಟಡಗಳ ಮೌಲ್ಯ ಮಾಪನ ವರದಿಗಳನ್ನು ಪರಿಶೀಲಿಸಲಾಗಿ ಈಗಾಗಲೇ ಬಿಡುಗಡೆಯಾದ ಅನುದಾನದ ಮೊತ್ತಕ್ಕೂ ಮತ್ತು ಮೌಲ್ಯಮಾಪನ ವರದಿಯಲ್ಲಿ ನಮೂದಿಸಿದ ಮೊತ್ತಕ್ಕೂ ತುಂಬಾ ವ್ಯತ್ಯಾಸವಿದ್ದು, ಸಮುದಾಯ ಭವನದ ಕಟ್ಟಡಕ್ಕೆ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಮೊತ್ತವಾದ ರೂ.3,08,75,000/-ಗಳ ಪೈಕಿ ರೂ.2,04,78,116/-ಗಳನ್ನು ಖರ್ಚು ಮಾಡಿ ರೂ.1,03,96,884/-ಗಳ ಅಕ್ರಮ ಅವ್ಯವಹಾರ ಎಸಗಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ. ಅದೇ ರೀತಿ ಬೀದರ್ ಜಿಲ್ಲೆಯ 5-ಕ್ರಿಶ್ಚಿಯನ್ ಚರ್ಚ ನವೀಕರಣಕ್ಕಾಗಿ ಸರ್ಕಾರದಿಂದ ಮಂಜೂರಾದ ಒಟ್ಟು ಅನುದಾನದ ಮೊತ್ತ ರೂ.50,00,000/- ಗಳೆಲ್ಲವನ್ನು ಬೀದರ್ ಕೆಎಮ್‌ಡಿಸಿ ಕಚೇರಿಗೆ ನಕಲಿ ದಾಖಲೆ ಸಲ್ಲಿಸಿ, ನಕಲಿ ಬ್ಯಾಂಕ್ ಖಾತೆ ಸೃಷ್ಟಿಸಿ, ಬ್ಯಾಂಕಿನಿಂದ ಪಡೆದು ಚರ್ಚ ಕಟ್ಟಡ ನವೀಕರಣದ ಕುರಿತು ರೂ.15,71,742/- ಗಳನ್ನು ಖರ್ಚು ಮಾಡಿದ್ದು, ತನಿಖೆಯಲ್ಲಿ ಸಂಗ್ರಹಿಸಿದ ದಾಖಲಾತಿಗಳಿಂದ ಮತ್ತು ಲೋಕೋಪಯೋಗಿ ಇಲಾಖೆ ಅಭಿಯಂತರರು ಮಾಡಿದ ಕಟ್ಟಡ ಮೌಲ್ಯಮಾಪನ ವರದಿಗಳಿಂದ ತಿಳಿದು ಬಂದಿರುತ್ತದೆ. ಹೀಗೆ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಮೊತ್ತವಾದ ರೂ.50,00,000/-ಗಳ ಪೈಕಿ ರೂ.34,28,258/-ಗಳ ಅಕ್ರಮ ಅವ್ಯವಹಾರ ಎಸಗಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ. ಹೀಗೆ ಬೀದರ್ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿರುವ ಏಳು ಕ್ರಿಶ್ಚಿಯನ್ ಸಮುದಾಯ ಭವನ ನಿರ್ಮಾಣಕ್ಕಾಗಿ ಮತ್ತು 5-ಚರ್ಚ ನವೀಕರಣಕ್ಕಾಗಿ ಸರ್ಕಾರದಿಂದ ಮಂಜೂರಾದ ಒಟ್ಟು ಮೊತ್ತ ರೂ.4,00,00,000/-ಗಳ ಪೈಕಿ ಈಗಾಗಲೇ ರೂ.3,58,75,000/- ಬಿಡುಗಡೆಯಾಗಿದ್ದು, ಸದರಿ ಅನುದಾನದ ಹಣದಲ್ಲಿ ರೂ.2,20,49,858/-ಗಳನ್ನು ಸಮುದಾಯ ಭವನ ನಿರ್ಮಾಣ ಮತ್ತು ಚರ್ಚ ನವೀಕರಣಕ್ಕಾಗಿ ಖರ್ಚು ಮಾಡಿರುವುದು ಪಿಡಬ್ಲುಡಿ ಮೌಲ್ಯಮಾಪನ ವರದಿಗಳಿಂದ ದೃಢಪಟ್ಟಿರುತ್ತದೆ ಹಾಗೂ ಉಳಿದ ಮೊತ್ತವಾದ ರೂ.1,38,25,142/-ಗಳನ್ನು ಎದುರುದಾರರು ಹಾಗೂ ಉಳಿದ ಆಪಾದಿತರು ದುರುಪಯೋಗ ಪಡಿಸಿಕೊಂಡಿರುವುದು ತನಿಖೆಯಲ್ಲಿ ಸಂಗ್ರಹಿಸಿದ ದಾಖಲಾತಿಗಳಿಂದ ರುಜುವಾತಾಗಿರುತ್ತದೆ.

**12.** 1 ಮತ್ತು 2ನೇ ಎದುರುದಾರರು ಸರ್ಕಾರದ ಜವಾಬ್ದಾರಿಯುತ ಹುದ್ದೆಯಲ್ಲಿದ್ದು ಕಾಮಗಾರಿ ಕುರಿತು ಸಲ್ಲಿಸಿದ ಪ್ರಸ್ತಾವನೆ ದಾಖಲಾತಿಗಳು ನೈಜತೆಯಿಂದ ಕೂಡಿರುತ್ತವೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸದೆ ಮತ್ತು ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡದೆ ಅವುಗಳ ಹಂತವನ್ನು ಸರಿಯಾಗಿ ಪರಿಶೀಲಿಸದೆ, ನಿಯಮಗಳನ್ನು ಗಾಳಿಗೆ ತೂರಿ, ಕಾಮಗಾರಿಗಳ ಅನುದಾನದ ಚೆಕ್ಕುಗಳನ್ನು ಬಿಡುಗಡೆ ಮಾಡಿ ಪ್ರಕರಣದ ಉಳಿದ ಆಪಾದಿತರಿಗೆ ಅವ್ಯವಹಾರ ಮಾಡಲು ಅವಕಾಶ ಮಾಡಿಕೊಟ್ಟಿದ್ದು, ತನಿಖೆಯಲ್ಲಿ ಸಂಗ್ರಹಿಸಿದ ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

**13.** ನಂತರ ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

**14.** ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರುಗಳ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

**15.** ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರುಗಳು ಅವರ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021)ರ ನಿಯಮ 3(1) (i) ರಿಂದ (iii) ನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

**16.** ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 2(6) ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2) ರಂತೆ ಕರ್ತವ್ಯ ದುರುಪಯೋಗಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರವೆಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

**17.** ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, 2ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ: 11/03/2022 ರಂದು ಹಾಗೂ 1ನೇ ಎದುರುದಾರರು ದಿನಾಂಕ: 08/05/2022ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ, 1 ಮತ್ತು 2ನೇ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. 1 ಮತ್ತು 2ನೇ ಎದುರುದಾರರು ತಮ್ಮ ಸಮಜಾಯಿಷಿಗಳಲ್ಲಿ ಒಂದೇ ರೀತಿಯ ಸಮಜಾಯಿಷಿ ನೀಡಿದ್ದು, ಅದರಲ್ಲಿ "ತಾವು ಕೆಲಸ ನಿರ್ವಹಿಸಿದ ಅವಧಿಯಲ್ಲಿ ಸರ್ಕಾರದ/ನಿರ್ದೇಶನಾಲಯದ ಮಾರ್ಗಸೂಚಿಗಳಡಿಯಲ್ಲಿಯೇ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೀದರ್‌ರವರ ಮುಖಾಂತರವೇ ನಿರ್ದೇಶನಾಲಯಕ್ಕೆ ಕಳುಹಿಸಿಕೊಟ್ಟಿರುವೆವು. ನಂತರ ಸರ್ಕಾರದ ಹಂತದಲ್ಲಿ ರಚಿತವಾದ ಕ್ರಿಶ್ಚಿಯನ್ ಡೆವಲಪ್‌ಮೆಂಟ್ ಕಮಿಟಿಯವರ ಶಿಫಾರಸ್ಸಿನಡಿಯಲ್ಲಿಯೇ ಸರ್ಕಾರವು ವಿವಿಧ ಕಾರ್ಯಕ್ರಮಗಳ ಅನುಷ್ಠಾನ ಸಂಬಂಧ ಮಂಜೂರಾತಿ ನೀಡಿರುತ್ತದೆ. ಅದರಂತೆ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಸಮುದಾಯ ಭವನ, ಚರ್ಚ್ ದುರಸ್ತಿ ಸಂಬಂಧ ಕೋರಿ ಸಲ್ಲಿಸಲಾಗಿರುವ ಸಂಸ್ಥೆಯ ಅಧ್ಯಕ್ಷರ ಹೆಸರಿನಲ್ಲಿಯೇ ಕಾಮಗಾರಿ ಪ್ರಗತಿ ಪರಿಶೀಲಿಸಿಯೇ ಸಹಾಯಧನ ನೀಡಲಾಗಿರುತ್ತದೆ. ಸರ್ಕಾರದ ಭಾಗದ ಮಂಜೂರಾದ ಅನುದಾನವನ್ನು ಅಕೌಂಟ್ ಪೇ ಚೆಕ್ ಮೂಲಕವೇ ಪಾವತಿಸಲಾಗಿರುತ್ತದೆ ಹಾಗೂ ಜಿಲ್ಲಾಧಿಕಾರಿಗಳ ಹುದ್ದೆಯು ತಾಂತ್ರಿಕ ಪರಿಣಿತವಲ್ಲದ ಹುದ್ದೆಯಾಗಿದ್ದು, ಸರ್ಕಾರದ ಆದೇಶದಲ್ಲಿನ ಶರತ್ತುಗಳನ್ವಯ ಕಾಮಗಾರಿ ವೆಚ್ಚದ ಮಾಹಿತಿ ಒದಗಿಸಿರುವುದರಿಂದ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ತಾವು ಯಾವುದೇ ರೀತಿಯ ಸರ್ಕಾರದ ಬಿಡುಗಡೆಯಾದ ಅನುದಾನವನ್ನು ತಮ್ಮ ವೈಯಕ್ತಿಕ ಖಾತೆಗೆ ದುರ್ವ್ಯವಹಾರ ಮಾಡಿರುವುದಿಲ್ಲ. ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ದೆಸೆಯಲ್ಲಿ ರೂಪಿತವಾದ ಕಾನೂನಿನ ಅಡಿಯಲ್ಲಿಯೇ ಕೆಲಸ ನಿರ್ವಹಿಸಿರುವೆವು. ತಾವು ಯಾವುದೇ ತಪ್ಪು ಎಸಗಿಲ್ಲ, ಯಾವುದೇ ದುರ್ವ್ಯವಹಾರ ಆಗಿರುವುದಿಲ್ಲ. ತಾವು ಕ್ರಮವಾಗಿ 24 ಮತ್ತು 28- ವರ್ಷಗಳಿಂದ ಶ್ರದ್ಧೆ ಮತ್ತು ನಿಷ್ಠೆಯಿಂದ ಕೆಲಸ ಮಾಡಿಕೊಂಡು ಕಾರ್ಯ ನಿರ್ವಹಿಸುತ್ತಾ ಬಂದಿರುವೆವು. ಹೀಗಾಗಿ ತಮ್ಮ ಮೇಲಿನ ಆರೋಪಗಳನ್ನು ತಾವು ಒಪ್ಪಿಕೊಳ್ಳುವುದಿಲ್ಲ ಹಾಗಜೂ ಈಗಾಗಲೇ ಗೌರವಾನ್ವಿತ ಆಲಿಕೆಗಳು ನಡೆಯುತ್ತಿರುವುದರಿಂದ ಇಲಾಖಾ ವಿಚಾರಣೆಯಿಂದ ತಮ್ಮನ್ನು ಮುಕ್ತಗೊಳಿಸಬೇಕೆಂದು" ವಿನಯಪೂರ್ವಕವಾಗಿ ಕೋರಿಕೊಂಡಿರುತಾರೆ.

**18.** 1 ಮತ್ತು 2ನೇ ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ಚರ್ಚ್‌ಗಳ ನವೀಕರಣಕ್ಕಾಗಿ ಸರ್ಕಾರದಿಂದ ಮಂಜೂರಾದ ಹಣವನ್ನು ದುರ್ಬಳಕೆ ಮಾಡಿಕೊಂಡು ಅವ್ಯವಹಾರ ನಡೆಸಿರುವುದು ಕಂಡುಬರುತ್ತದೆ. 1 ಮತ್ತು 2ನೇ ಎದುರುದಾರರು ನೀಡಿರುವ

ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

**19.** ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರುಗಳು ಚರ್ಚ್‌ಗಳ ನವೀಕರಣಕ್ಕಾಗಿ ಸರ್ಕಾರದಿಂದ ಮಂಜೂರಾದ ಹಣವನ್ನು ದುರ್ಬಳಕೆ ಮಾಡಿಕೊಂಡು ಅವ್ಯವಹಾರ ನಡೆಸಿರುವುದು ಕಂಡುಬರುತ್ತದೆ. ತನ್ಮೂಲಕ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

**20.** ಅದಲ್ಲದೆ 1 ಮತ್ತು 2ನೇ ಎದುರುದಾರರು (1) ಶ್ರೀ. ಅಬ್ದುಲ್ ಮಜೀದ್ @ ಮಾಜೀದ್, ಬಿನ್ ಅಬ್ದುಲ್ ಸಮದ, ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಔರಾದ(ಬಿ), ಜಿಲ್ಲೆ ಬೀದರ & ನಿಯೋಜನೆ ಮೇಲೆ ಈ ಹಿಂದಿನ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು, ಬೀದರ, ಹಾಲಿ ಸಹಾಯಕ ಕೃಷಿ ನಿರ್ದೇಶಕರು, ಕಾರ್ಕಳ, ಉಡುಪಿ ಜಿಲ್ಲೆ (ನಿವೃತ್ತಿ ಹೊಂದುವ ದಿ:31-05-2025) (2) ಪಿ. ಶಿವಕುಮಾರ, ಬಿನ್ ವೀರಭದ್ರಪ್ಪಾ, ಸಿ.ಸಿ.ಟಿ., (ಕ್ಲರ್ಕ್ ಕಂ ಟೈಪಿಸ್ಟ್), ಈ ಹಿಂದಿನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೀದರ ಸದ್ಯ ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹುಮ್ನಾಬಾದ, ಬೀದರ ಜಿಲ್ಲೆ, (ನಿವೃತ್ತಿ ಹೊಂದುವ ದಿ:30-06-2035) ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

**21.** ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)

ಉಪಲೋಕಾಯುಕ್ತರು

ಕರ್ನಾಟಕ ರಾಜ್ಯ, ಬೆಂಗಳೂರು.